ಕರೆಸಿದ್ದು.' ಹೀಗೆಂದು ಅಧ್ಯಕ್ಷೆ ತನ್ನ ಬಲಗಡೆ ತಿರುಗಿ ನೋಡಿ, 'ಪ್ರೊಫೆಸರ್ ಅಯ್ಯಂಗಾರ್ ಸರ್, ಯುವರ್ ಟರ್ನ್ ಪ್ಲೀಜ್,' ಎಂದಳು. ತಿರುನಾಮ ತೊಟ್ಟು ಜಪ್ಪೆಂದು ಕೂತಿದ್ದ ಪ್ರೊಫೆಸರ್ ಅಯ್ಯಂಗಾರ್ ಥಟ್ಟನೆ ಎಚ್ಚರಾದವರಂತೆ,

'ಸಾಪೇಕ್ಷ ಸಿದ್ಧಾಂತದ ಬಗ್ಗೆ ನಿನಗೆ ಗೊತ್ತುಂಟೋ?' ಎಂದು ಕೇಳಿದರು.

ನಾನು ತಬ್ಬಿಬ್ಬಾದೆ. ಈ ಸಿದ್ಧಾಂತದ ಹೆಸರು ಕೇಳಿದ್ದೆನಲ್ಲದೆ ವಿವರಗಳು ನನಗೆ ಗೊತ್ತಿರಲಿಲ್ಲ.

'ಸರ್, ಏನೂ ಗೊತ್ತಿಲ್ಲ,' ಎಂದೆ.

'ಗೊತ್ತುಮಾಡಿಕೋಬೇಕು. ಯಾಕೆಂದರೆ ಲೋಕದಲ್ಲಿ ಸ್ಪೀಡ್ ಆಫ್ ಲೈಟಿಗಿಂತ ಆಬ್ಸಲ್ಯೂಟ್ ಆದದ್ದು ಏನೂ ಇಲ್ಲ. ಉಳಿದೆಲ್ಲವೂ ಅದಕ್ಕೆ ಸಾಪೇಕ್ಷವಾಗಿರುತ್ತವೆ, ಹಾಗೂ ಪರಸ್ಪರ ಸಾಪೇಕ್ಷವಾಗಿರುತ್ತದೆ. ಏನು ಕನೆಕ್ಷನ್ ಶೊಲ್ಲುಂಗೊ. ಕನೆಕ್ಷನ್ ರುಂಬಾ ಇರಿಕ್ಕಿರದ್... ಈ ಮೇನ್‌ಸ್ಟ್ರೀಮ್ ಮಾರ್ಜಿನಲ್ ಸ್ಟ್ರೀಮ್ ಇದೆಲ್ಲಾ ಒಂದು ಇಲ್ಯೂಶನ್, ಅಳೆದು ನೋಡಿದರೆ ರಿಲೆಟಿವ್ಸ್.'

'ಅವು ಪರಸ್ಪರ ಕಂಡರೆ ಮಾತಾಡೋದೇ ಇಲ್ಲ, ಇನ್ನು ರಿಲೆಟಿವ್ಸ್ ಆಗುವುದು ಹೇಗೆ?' ನಾನು ಧೈರ್ಯ ಮಾಡಿ ಪ್ರೊಫೆಸರರನ್ನು ಕೇಳಿದೆ. (ಅವರು ಇನ್ನೂ ಪೂರ್ತಿ ಎಚ್ಚರಾಗದ್ದರಿಂದ ರಿಲೆಟಿವ್ ಬದಲು ರಿಲೆಟಿವ್ಸ್ ಎಂದು ಹೇಳಿದ್ದರೇ?)'

'ರಿಲೆಟಿವ್ ಆದವು ರಿಲೇಟಿವ್ಸ್ ಆಗ್ತವೆ, ರಿಲೆಟಿವ್ಸ್ ಆದವು ರಿಲೇಟಿವ್ ಕೂಡಾ. ವಾಂಗೊ, ವಾಂಗೊ, ಏಗಾತ್ಮನ್! ಇಂದು ಮಾರ್ಜಿನಲ್ ಆದವರು ನಾಳೆ ಮೇನ್‌ಸ್ಟ್ರೀಮ್ ಆಗ್ತಾರೆ. ಉದಾಹರಣೆಗೆ, ಇಳಂಗೋ ಅಡಿಗಳ್.'

'ಎಷ್ಟೋ ವರ್ಷಗಳಿಂದ ಪ್ರಯತ್ನಿಸ್ತಾ ಇದ್ದೀನಿ, ಸಾರ್, ಇನ್ನೂ ಆಗಿಲ್ಲ. ಅಡಿಗೆ ಮಾಡೋರು ಮಾಡ್ತಲೇ ಇದ್ದಾರೆ, ಊಟ ಮಾಡೋರು ಮಾಡುತ್ತಲೇ ಇದ್ದಾರೆ. ಇಷ್ಟು ಶ್ರಮ ವಹಿಸಿ ಇಲ್ಲಿ ತನಕ ಬಂದಿದ್ದೇನೆ, ಈಗ ಪ್ರವೇಶ ನಿರಾಕರಿಸಿದರೆ ಹೇಗೆ?'

ಮಧ್ಯ ಪ್ರವೇಶಿಸಿದ ಅಧ್ಯಕ್ಷೆ, 'ಯಾರೂ ನಿನಗೆ ಪ್ರವೇಶ ನಿರಾಕರಿಸ್ತ ಇಲ್ಲ, ಯಾರಿಗೆ ಏನು ಅರ್ಹತೆಯಿದೆಯೋ ಅದು ಅವರಿಗೆ ದೊರಕುತ್ತದೆ. ಬಿ ರೆಸ್ಟ್ ಅಶ್ಯೂರ್ಡ್' ಎಂದಳು ಎಲ್ಲರಿಗೂ ಕೇಳಿಸುವ ಹಾಗೆ. ಪ್ರಚಂಡ ಕರತಾಡನ ಬಿತ್ತು ಈ ಮಾತಿಗೆ.

'ಇರಲಿ, ನಿನಗೆ ಸೈನ್ಸ್‌ನ ಹಾದಿ ಬೇಡ; ಅಧ್ಯಾತ್ಮದ್ದು?' ಅಯ್ಯಂಗಾರ್ ಮುಂದುವರಿಸಿದರು.

'ಅಧ್ಯಾತ್ಮ ನನಗೆ ಗೊತ್ತಿಲ್ಲ ಸರ್. ಜೀವಕ್ಕಿಂತ ಆಚೆಗಿಂದು ಏನೂ ಗೊತ್ತಿಲ್ಲ. ವಾಸ್ತವ ಎಂದರೆ ಜೀವ ಸಹಾ ಒಂದು ಮಿಸ್ಟರಿ ಅನಿಸುತ್ತದೆ.'

'ಅಧ್ಯಾತ್ಮ ಗೊತ್ತಿರುತ್ತಿದ್ದರೆ ನೀನಿಷ್ಟು ಕಷ್ಟ ಪಡುತ್ತಿರಲಿಲ್ಲ. ಎಲ್ಲವೂ ಆ ಪರಮಾತ್ಮನಿಗೆ ಸಲುವಾಗ ಮಾರ್ಜಿನಲ್ ಏನು, ಮೇನ್‌ಸ್ಟ್ರೀಮ್ ಏನು?! ಪಾರ್ತೆಯಾ?'

'ಪಾರ್ತೆ ಸಾರ್, ಪಾರ್ತೆ. ಆದ್ದರಿಂದಲೇ ನಾನು ಕೇಳೋದು, ನನ್ನನ್ನು ಮೇನ್‌ಸ್ಟ್ರೀಮಿಗೆ ತಗೊಂಡರೆ ಯಾರಿಗೇನು ನಷ್ಟ?'

ಅಧ್ಯಕ್ಷೆ ಇನ್ನೊಮ್ಮೆ ಮಧ್ಯ ಪ್ರವೇಶಿಸಿ, 'ಟ್ರೈಬ್ಯೂನಿಗೆ ಪ್ರಶ್ನೆ ಹಾಕುವುದು ಅಲೌಡ್ ಅಲ್ಲ,' ಎಂದಳು. ನಂತರ ಎಡಗಡೆಯ ಮಹಾತ್ಮನ ಕಡೆ ತಿರುಗಿ, 'ಡಾಕ್ಟರ್ ನಾಯ್ಡು, ನಿಮ್ಮ ವಿಟ್ನೆಸ್,' ಎಂದಳು.

ಡಾಕ್ಟರ್ ನಾಯ್ಡು ಮೊದಲು ಅಧ್ಯಕ್ಷೆಯನ್ನು ಹೊಗಳಿದರು; ನಂತರ ಪ್ರೊಫೆಸರ್ ಅಯ್ಯಂಗಾರ್‌ರನ್ನು ಪ್ರಶಂಸಿದರು. ಇಂಥಾ ಮಹನೀಯರಿದ್ದ ಕಡೆ ತನ್ನನ್ನು ಒಬ್ಬ ಸದಸ್ಯನನ್ನಾಗಿ